**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಕಡೂರು.**

**ಸಿ.ಸಿ. ಸಂಖ್ಯೆ:4199/2024**

| | |
|---|---|
| ಪ್ರಾಸಾ : | 03 |
| ಚಾಸಾ : | 04 |

**ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ 17.06.2026.**

| | | |
|---|---|---|
| ಸಾಕ್ಷಿಯ ಹೆಸರು | : | ವೆಂಕಟೇಶ |
| ತಂದೆಯ ಹೆಸರು | : | ರಾಮಯ್ಯ |
| ವಯಸ್ಸು | : | 57 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸಸ್ಥಳ | : | ಉಡುಗೆರೆ |

**ಮುಖ್ಯ ವಿಚಾರಣೆ : ಸ.ಸ.ಅ. ರವರಿಂದಃ**

ಚಾಸಾ 1, ರಿಂದ 3 ಪರಿಚಯವಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ. ನಾನು ಪೋಲಿಸರಿಗೆ ಯಾವುದೆ ಹೇಳಿಕೆ ನೀಡಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಜರುಗಿಸಿಲ್ಲ, ಯಾವುದೆ ವಾಹನಗಳನ್ನು ಅಮಾನತುಪಡಿಸಿಕೊಂಡಿಲ್ಲ, ನನ್ನ ಸಮಕ್ಷಮ ಯಾರು ಸಹಿ ಮಾಡಿಲ್ಲ. ಆರೋಪಿಯನ್ನು ನಾನು ನೋಡಿಲ್ಲ.

ಈ ಹಂತದಲ್ಲಿ ಸಾಕ್ಷಿಗೆ ನಿಪಿ–3 ರಂತೆ ಸ್ಥಳ ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ–3(ಬಿ)** ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ಮತ್ತು 5 ರಂತೆ ಫೋಟೋಗಳನ್ನು ನೋಡಿ ಗುರುತಿಸಿದ್ದು, ಆದರೆ ಅದನ್ನು ಎಲ್ಲಿ ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಈ ಹಂತದಲ್ಲಿ ಸಾಕ್ಷಿಗೆ ನಿಪಿ-6 ಅಮಾನತು ಪಂಚನಾಮೆ ಪ್ರತಿಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸಾಕ್ಷಿಯ ಸಹಿಯನ್ನು **ನಿಪಿ-6(ಬಿ)** ಎಂದು ಗುರುತಿಸಲಾಯಿತು.

ಸಾಕ್ಷಿಗೆ ನಿಪಿ-8 ಮತ್ತು 9 ರಂತೆ ಫೋಟೋಗಳನ್ನು ನೋಡಿ ಗುರುತಿಸಿದ್ದು, ಆದರೆ ಅದನ್ನು ಎಲ್ಲಿ ಯಾವ ಕಾರಣಕ್ಕೆ ತೆಗೆಯಲಾಯಿತು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ. ರವರು ಅನುಮತಿಯನ್ನು ಕೋರಿದ್ದು ನೀಡಲಾಯಿತು).**

**ಪಾಟೀ ಸವಾಲುಃ ಸ.ಸ.ಅ. ರವರಿಂದಃ**

ದಿಃ 08.09.2024 ರಂದು ನಾನು ನನ್ನ ಕಾರಿನಲ್ಲಿ ಹೊಸದುರ್ಗಕ್ಕೆ ಹೋಗಿದ್ದು ವಾಪಸ್ಸು ಊರಿಗೆ ಬರಲು ಚೌಳಹಿರಿಯೂರು ಮಾರ್ಗವಾಗಿ ಸಣ್ಣೇನಹಳ್ಳಿ ಕಡೆಗೆ ಬರುತ್ತಿದ್ದಾಗ ಒಂದು ಕಾರಿನ ಚಾಲಕ ತನ್ನ ಕಾರನ್ನು ಅತೀ ವೇಗ ಮತ್ತು ಅಜಾರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು, ನನ್ನನ್ನು ಹಿಂದಿಕ್ಕಿದರು ಎಂದರೆ ಸರಿಯಲ್ಲ. ನಂತರ ಚೌಳಹಿರಿಯೂರು ಸಣ್ಣೇಣಹಳ್ಳಿ ಗೇಟ್ ನಡುವೆ ಮಲ್ಲಪ್ಪರವರ ಜಮೀನಿನ ಬಳಿ ರಸ್ತೆಯಲ್ಲಿ ಸಣ್ಣೇಣಹಳ್ಳಿ ಗೇಟ್ ಕಡೆಯಿಂದ ಬರುತ್ತಿದ್ದ ಒಂದು ಬೈಕಿಗೆ ಸದರಿ ಕಾರಿನ ಚಾಲಕ ತನ್ನ ಕಾರನ್ನು ಡಿಕ್ಕಿ ಪಡಿಸಿದ್ದು, ನಂತರ ನಾನು ನನ್ನ ಕಾರನ್ನು ರಸ್ತೆ ಬದಿಗೆ ನಿಲ್ಲಿಸಿ ಹೋದಾಗ ಚಾಸಾ 3 ರವರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ. ನಂತರ ಇಬ್ಬರು ನೋಡಲಾಗಿ ಬೈಕ್ ಸವಾರ ಕಲ್ಲೇದೇವರಹಳ್ಳಿ ಗ್ರಾಮದ ಮಂಜಪ್ಪ ಆಗಿದ್ದರು ಎಂದರೆ

ಸರಿಯಲ್ಲ. ಅವರಿಗೆ ಅಪಘಾತದಿಂದ ಎಡಕಾಲಿನ ಹೆಬ್ಬೆರಳಿಗೆ, ಎಡ ಮೊಣಕಾಲಿಗೆ ಹಾಗೂ ಸೊಂಟಕ್ಕೆ, ಹೊಟ್ಟೆಯ ಕೆಲಭಾಗಕ್ಕೆ ಪೆಟ್ಟಾಗಿದ್ದು, ಅವರು ಬರುತ್ತಿದ್ದ ದ್ವಿಚಕ್ರ ವಾಹನ ಸಂಖ್ಯೆ ಕೆಎ–18–ಇಎಂ–1590 ಹೋಂಡ ಶೈನ್ ಆಗಿತ್ತು ಎಂದರೆ ಸರಿಯಲ್ಲ. ಅಲ್ಲದೆ ಅಪಘಾತಪಡಿಸಿದ ಕಾರ್ ಸಂಖ್ಯೆ ಎಪಿ–09–ಬಿಟಿ–3271 ಮಾರುತಿ ಶಿಫ್ಟ್ ಕಾರ್ ಆಗಿತ್ತು ಎಂದರೆ ಸರಿಯಲ್ಲ. ನಂತರ ಗಾಯಾಳು ಮಂಜಪ್ಪನನ್ನು 108 ಆಂಬುಲೆನ್ಸ್ ಮೂಲಕ ಕಡೂರಿಗೆ ಕಳುಹಿಸಲಾಯಿತು ಎಂದರೆ ಸರಿಯಲ್ಲ. ಕಾರಿನ ಚಾಲಕನು ತನ್ನ ಕಾರನ್ನು ಅತೀ ವೇಗ ಮತ್ತು ಅಜಾರೂಕತೆಯಿಂದ ಚಲಾಯಿಸಿಕೊಂಡು ಬಂದು, ಸದರಿ ದ್ವಿಚಕ್ರ ವಾಹನಕ್ಕೆ ಡಿಕ್ಕಿ ಪಡಿಸಿದ ಬಗ್ಗೆ ನಾನು ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ **180** ರಂತೆ ಪೊಲೀಸರ ಮುಂದೆ ನೀಡಿದ ಹೇಳಿಕೆಯ ಭಾಗವನ್ನು ಈ ಕೆಳಕಂಡಂತೆ ಓದಿ ಹೇಳಲಾಗಿ, ಸಾಕ್ಷಿಯು ಅದನ್ನು ನಿರಾಕರಿಸಿದರು. ಸದರಿ ಹೇಳಿಕೆಯ ಭಾಗವನ್ನು **ನಿಪಿ–11** ಎಂದು ಗುರುತಿಸಲಾಯಿತು.

ನಂತರ ದಿಃ 12.09.2024 ರಂದು ಅಪಘಾತ ವಿಚಾರವಾಗಿ ನಾನು ಅಪಘಾತ ಸ್ಥಳವನ್ನು ತೋರಿಸಿದ ಮೇರೆಗೆ ನನ್ನ ಹಾಗೂ ಚಾಸಾ 2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 3.30 ಗಂಟೆ 4.00 ಗಂಟೆ ಸಮಯದವರೆಗೆ ನಿಪಿ–3 ರಂತೆ ಪೋಲಿಸರು ಪಂಚನಾಮೆ ಜರುಗಿಸಿದ್ದು, ಸ್ಥಳದಲ್ಲಿ ನಿಪಿ–4 ಮತ್ತು 5 ರಂತೆ ಫೋಟೋ ತೆಗೆದರು ಎಂದರೆ ಸರಿಯಲ್ಲ. ಅದೇ ದಿನ ಯಗಟಿ ಪೋಲಿಸ್ ಠಾಣಾ ಆವರಣದಲ್ಲಿ ವಾಹನಗಳನ್ನು ಅಮಾನತುಪಡಿಸಿಕೊಳ್ಳಲು ಅಪಘತಕ್ಕೀಡಾದ ಕಾರು ಮತ್ತು ದ್ವಿಚಕ್ರ ವಾಹನವನ್ನು ಸಂಜೆ 5.00 ರಿಂದ 6.00 ಗಂಟೆ ಸಮಯದವರೆಗೆ ಪಂಚನಾಮೆ ನಡೆಸಿ, ನಿಪಿ–8 ಮತ್ತು 9 ರಂತೆ ಫೋಟೊ ತೆಗೆದರು ಎಂದರೆ ಸರಿಯಲ್ಲ. ನಾನು ಆರೋಪಿಗಳೊಂದಿಗೆ ರಾಜಿ ಮಾಡಿಕೊಂಡು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ:4 ಪ್ರಾಸಾ:3

**ಪಾಟೀ ಸವಾಲು : ಶ್ರೀ.ಆರ್.ಹೆಚ್. ವಕೀಲರಿಂದ, ಆರೋಪಿತರ ಪರವಾಗಿ**

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

**ಮರುವಿಚಾರಣೆ : ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇದೆ

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ
ಕಡೂರು.